ಕರ್ನಾಟಕ ಸರ್ಕಾರ
(ಪೋಲೀಸ್ ಇಲಾಖೆ)

ಸಂಖ್ಯೆ: 10/ಅಪರಾಧ/ಮಿಶ್ರ(2)/2010

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೋಲೀಸ್ ರವರ ಕಛೇರಿ,
ನೃಪತುಂಗ ರಸ್ತೆ, ಬೆಂಗಳೂರು.
ದಿನಾಂಕ:01-10-2010.

# ಜ್ಞಾಪನ

ವಿಷಯ : ಕಲಂ 498, 498ಎ ಭಾ.ದ.ಸಂ., ಮತ್ತು ವರದಕ್ಷಿಣೆ ನಿಷೇಧ ಕಾಯ್ದೆ ಅಡಿಯಲ್ಲಿ ಆರೋಪಿಗಳನ್ನು ದಸ್ತಗಿರಿ ಮಾಡುವ ಬಗ್ಗೆ ನೀಡಿರುವ ಸ್ಥಾಯಿ ಸೂಚನೆಗಳ ಕುರಿತು.

** ** **

ವರದಕ್ಷಿಣೆ ನಿಷೇಧ ಕಾಯ್ದೆ ಅಥವಾ ಭಾ.ದ.ಸಂ.ಯ ಕಲಂ 498, 498(ಎ) ಅಡಿಯಲ್ಲಿ ನೀಡಿದ ದೂರುಗಳ ಆಧಾರದ ಮೇಲೆ ಕೆಲವೊಂದು ಪ್ರಕರಣಗಳಲ್ಲಿ, ತಪ್ಪಾಗಿ ಪ್ರಕರಣಗಳನ್ನು ಪತಿಯ ಮತ್ತು ಅವರ ಹತ್ತಿರದ ಮುಗ್ಧ ಸಂಬಂಧಿಕರ ವಿರುದ್ಧ ದಾಖಲು ಮಾಡಿರುವ ದೂರುಗಳು ಗಮನಕ್ಕೆ ಬಂದಿರುತ್ತವೆ. ಈ ರೀತಿಯ ಪ್ರಕರಣಗಳಲ್ಲಿ ಫಿರ್ಯಾದುದಾರರು ಆರೋಪಿಸುವ ಆರೋಪಿಯ ಸಂಬಂಧಿಗಳನ್ನು ದೂರಿನಲ್ಲಿ ಹೆಸರಿಸುವುದು ಸಾಮಾನ್ಯವಾಗಿರುತ್ತದೆ. ಇಂತಹ ಪ್ರಕರಣಗಳು ತನಿಖೆಯ ನಂತರ ಆಪಾದಿತರುಗಳು ಮುಗ್ಧರೆಂದು ಕಂಡುಬಂದಿರುತ್ತದೆ. ಇದು ಪೋಲೀಸ್ ಅಧಿಕಾರಿಗಳು ಸರಿಯಾದ ಸಾಕ್ಷ್ಯ ಮತ್ತು ಪುರಾವೆ ದಾಖಲೆಗಳನ್ನು ಸಂಗ್ರಹಿಸಿದ ನಂತರ ಇವರನ್ನು ದಸ್ತಗಿರಿ ಮಾಡಬೇಕೆ ಅಥವಾ ಬೇಡವೇ ಎಂಬ ಬಗ್ಗೆ ತೀರ್ಮಾನ ಕೈಗೊಳ್ಳದೆ ಎಸಗುವ ಲೋಪವಾಗಿರುತ್ತದೆ.

ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಜೋಗಿಂದರ್ ಕುಮಾರ್ ವಿರುದ್ಧ ಉತ್ತರ ಪ್ರದೇಶ ರಾಜ್ಯ ಪ್ರಕರಣದಲ್ಲಿ ನಿರ್ದೇಶಿಸಿರುವಂತೆ, ಪೋಲೀಸ್ ಅಧಿಕಾರಿಗಳು ಸಿ.ಆರ್.ಪಿ.ಸಿ.ಯ ಕಲಂ 41 ರ ಅನ್ವಯ ದಸ್ತಗಿರಿ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಆದರೆ, ದಸ್ತಗಿರಿ ಮಾಡುವ ಮೊದಲು ತನಿಖೆಯನ್ನು ಕೈಗೊಂಡು, ಸಾಕಷ್ಟು ಸಾಕ್ಷ್ಯಾಧಾರ ಮತ್ತು ಮಾಹಿತಿಗಳನ್ನು ಸಂಗ್ರಹಿಸಿ ದಸ್ತಗಿರಿ ಮಾಡುವ ಅವಶ್ಯಕತೆ ಅವನ/ಅವಳ ವಿರುದ್ಧ ಇದೆಯೇ ಎಂಬುದನ್ನು ಧೃಡಪಡಿಸಿಕೊಂಡು, ದಸ್ತಗಿರಿ ಮಾಡಬೇಕು. ಅನ್ಯತಾ ಕೇವಲ ಯಾವುದೇ ವ್ಯಕ್ತಿ ನೀಡಿದ ಫಿರ್ಯಾದಿನ ಆಧಾರದ ಮೇಲೆ ಅಥವಾ ಪ್ರಥಮ ವರ್ತಮಾನ ಪತ್ರದಲ್ಲಿ ಹೆಸರು ಇದ್ದ ಮಾತ್ರಕ್ಕೆ ಅವರನ್ನು ದಸ್ತಗಿರಿ ಮಾಡುವುದು ಸಮಂಜಸವಾಗಿರುವುದಿಲ್ಲ.